


ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ನಡೆಯುತ್ತಿಲ್ಲ. ಕೆಲವೇ ಕೆಲವು ಸಂಶೋಧನಾ ಕೇಂದ್ರಗಳಿದ್ದು ಅವುಗಳಿಗೆ ಬೇಕಾದಷ್ಟು ಅನುದಾನ ಸಿಗುತ್ತಿಲ್ಲ. ಶಿಕ್ಷಣಕ್ಕಾಗಿ ಸರ್ಕಾರ ತೊಡಗಿಸುತ್ತಿರುವ ಹಣ ತುಂಬ ಕಡಿಮೆ.

## ಶಿಶು ಕೇಂದ್ರಿತ ಶಿಕ್ಷಣದ ಮುಖ್ಯಾಂಶಗಳು

- ಶಿಶು ಕೇಂದ್ರಿತ ಶಿಕ್ಷಣ ವ್ಯವಸ್ಥೆಗೆ ಪ್ರಾಮುಖ್ಯತೆ ನೀಡುವ 'ಎನ್‌ಸಿಎಫ್' ಅನುಭವಜನ್ಯ ಕಲಿಕೆಗೆ ಒತ್ತು ನೀಡಬೇಕೆನ್ನುತ್ತದೆ. ಪೋಷಕರನ್ನೇ ಪ್ರಥಮ ಶಿಕ್ಷಕರು ಎಂದು ಪರಿಗಣಿಸುವ ಪಠ್ಯಕ್ರಮ ಚೌಕಟ್ಟು, ಮಕ್ಕಳ ಕಲಿಕೆಯಲ್ಲಿ ಪೋಷಕರು ಹೆಚ್ಚಿನ ಮಟ್ಟದಲ್ಲಿ ಪಾಲ್ಗೊಳ್ಳಬೇಕು ಎನ್ನುತ್ತದೆ. ಪ್ರಾರಂಭಿಕ ಹಂತದಲ್ಲೇ ಅಕ್ಷರ, ಸಂಖ್ಯಾ ಜ್ಞಾನ ಮೂಡಿಸಬೇಕಾದ ಅನಿವಾರ್ಯತೆಯನ್ನು ಸಾರುವ ನೂತನ ಶಿಕ್ಷಣ ನೀತಿ, ಶಿಶುವಿನ ಆರೋಗ್ಯ, ಸುರಕ್ಷತೆ, ಪೌಷ್ಟಿಕ ಬೆಳವಣಿಗೆ, ಸ್ವಯಂನೆರವು, ಶುಚಿತ್ವ, ಆಟೋಟಗಳ ಚಾಕಚಕ್ಯತೆ, ಸಂವಹನಕಲೆ, ಉತ್ತಮ ಹವ್ಯಾಸ ಮತ್ತು ಭಾವನಾತ್ಮಕ ಬೆಳವಣಿಗೆಗೆ ಬೇಕಾದ ಎಲ್ಲ ಸಿದ್ಧ ಅಂಶಗಳು ಹೊಸ ಪಠ್ಯಕ್ರಮದ ಭಾಗಗಳಾಗಿರಲಿವೆ ಎಂದಿದೆ.
- ಆಟದ ರೂಪದಲ್ಲಿ ಕಲಿಕೆ ನಡೆಯಬೇಕು ಎಂದು ಪ್ರತಿಪಾದಿಸುವ ಎನ್‌ಸಿಎಫ್ ಅತ್ಯಂತ ಅನಾಯಾಸವಾಗಿ ಹೊಂದಿಕೊಳ್ಳುವ ಮತ್ತು ವೈವಿಧ್ಯಮಯ ಕಲಿಕಾ ಅಗತ್ಯಗಳನ್ನು ಸಾಧಿಸಲೇಬೇಕು ಎನ್ನುತ್ತದೆ. ರಾಜ್ಯಗಳು ತಮಗೆ ಬೇಕಾದ ರೀತಿಯಲ್ಲಿ ನೀತಿಯನ್ನು ಜಾರಿಗೊಳಿಸಿಕೊಳ್ಳಬಹುದಾದರೂ, ಗುಣಮಟ್ಟದಲ್ಲಿ ರಾಜಿಯಾಗುವಂತಿಲ್ಲ. ಎಲ್ಲರನ್ನೂ ಒಳಗೊಳ್ಳುವ, ಆಧುನಿಕ ಮತ್ತು ಅತ್ಯುನ್ನತ ಗುಣಮಟ್ಟದ ಶಿಕ್ಷಣ ಪ್ರತಿ ವಿದ್ಯಾರ್ಥಿಗೂ ಸಿಗಬೇಕೆನ್ನುವುದು ನೀತಿಯ ಉದ್ದೇಶವಾಗಿದೆ.
- ನಾಲ್ಕು ಹಂತಗಳಲ್ಲಿ ನಡೆಯುವ ಶೈಕ್ಷಣಿಕ ಚಟುವಟಿಕೆಗಳು ಇಡೀ ದೇಶದ ವಿವಿಧ ಬಗೆಯ ಶೈಕ್ಷಣಿಕ ಮಾದರಿಗಳ ಅಗತ್ಯಗಳನ್ನು ಪೂರೈಸುವಂತಿರಬೇಕು ಎನ್ನುವ ಭದ್ರ ತಳಹದಿಯ ಮೇಲೆ ರೂಪುಗೊಂಡಿರುವ ಶಿಕ್ಷಣ ನೀತಿಯ ಅನುಷ್ಠಾನಕ್ಕೆ ಬೇಕಾದ ಕಾರ್ಯಸೂಚಿಯನ್ನು ವಿಶದವಾಗಿ ತಿಳಿಸುವ ಕರಡು ಎನ್‌ಸಿಎಫ್ ಬಗ್ಗೆ ತರಹೇವಾರಿ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.
- 3ರಿಂದ 18ರ ವಯಸ್ಸಿನವರೆಗೆ ಶಿಕ್ಷಣ ಒದಗಿಸುವ ಸಲುವಾಗಿ ನೂತನವಾಗಿ ರೂಪುಗೊಂಡಿರುವ ಶಿಕ್ಷಣ ನೀತಿಯು ಮನುಷ್ಯನಿಗೆ ಸಾಧ್ಯವಿರುವ ಎಲ್ಲ ಸಾಮರ್ಥ್ಯ, ಮೌಲ್ಯಗಳು ಮತ್ತು ಸ್ವಭಾವಗಳನ್ನು ಬೆಳೆಸುವುದರತ್ತ ಹೆಚ್ಚು ಗಮನ ಹರಿಸುತ್ತದೆ. ಹಾಗಾದಲ್ಲಿ ಶಿಕ್ಷಣದ ಮೂಲ ಉದ್ದೇಶ ನೆರವೇರಿದಂತೆಯೆ. ಗಣಿತವನ್ನು ಆಟದ ರೀತಿಯಲ್ಲಿ ಕಲಿಸುವ ಪರಿಕಲ್ಪನೆಯಂತೂ ವಿನೂತನ ಮತ್ತು ವಿಶಿಷ್ಟವಾದುದು.
- ಇದುವರೆಗಿನ ಪಠ್ಯಕ್ರಮದಲ್ಲಿ ಮೊದಲೇ ನಿಗದಿಪಡಿಸಿದ ವಿಷಯಗಳಿರುತ್ತಿದ್ದವು. ವಿದ್ಯಾರ್ಥಿಗೆ ಅವು ಬೇಕೋ ಬೇಡವೋ ಎಂಬ ಯಾವ ಚಿಂತನೆಯೂ ಅಲ್ಲಿರುತ್ತಿರಲಿಲ್ಲ. ಈಗ ಹಾಗಲ್ಲ. ಲಭ್ಯವಿರುವ ನೂರಾರು ವಿಷಯಗಳಲ್ಲಿ ವಿದ್ಯಾರ್ಥಿ ತನಗೆ ಬೇಕಾದ ಹಾಗೂ ಬೇಕಾದಷ್ಟು ವಿಷಯಗಳನ್ನು ಆಯ್ಕೆಮಾಡಿಕೊಂಡು ಕಲಿಯಬಹುದು.
- ಶಿಕ್ಷಕರ ವಿಷಯಕ್ಕೆ ಬಂದರೆ ಅಧ್ಯಾಪನ ಕಲೆ, ಉತ್ತಮ ಅಭ್ಯಾಸಗಳು ಮತ್ತು ಸಾಂಸ್ಕೃತಿಕ ಆಯಾಮಗಳು, ಶಿಕ್ಷಣ ನೀತಿಯ ಪ್ರಮುಖ ಗುರಿಯಾದ 'ಉನ್ನತ ಗುಣಮಟ್ಟ ಸಾಧನೆ'ಯ ಕಡೆ ಮುಖ ಮಾಡಿಕೊಂಡಿರಬೇಕು ಎಂಬ ಕಟ್ಟು ನಿಟ್ಟು ಇಲ್ಲಿದೆ.
- ಒಂದುಗೂಡಿಸುವ (Integrative) ಮತ್ತು ಸಮಗ್ರತೆಗೆ (holistic) ಒತ್ತು ನೀಡುವ ಹೊಸ ಶಿಕ್ಷಣ ನೀತಿ, ದೇಶ ಎದುರಿಸುತ್ತಿರುವ ನಿಜವಾದ ಸವಾಲುಗಳನ್ನು ಮೆಟ್ಟಿನಿಲ್ಲಲು ಸಹಾಯ ಮಾಡುತ್ತದೆ. ಕಡಿಮೆ ಸಂಪನ್ಮೂಲ, ಬೋಧನಾಕಲೆಯ ಅನುಪಸ್ಥಿತಿ ಮತ್ತು ನೆನಪಿನ ಶಕ್ತಿಗೆ ಮಣೆಹಾಕುವ ಪರೀಕ್ಷಾ ವ್ಯವಸ್ಥೆಗಳು ಇನ್ನು ಮುಂದೆ ಕಣ್ಮರೆಯಾಗಲಿವೆ. ಭಾಷಾ ಕಲಿಕೆ ಮತ್ತು ಭಾಷೆಯ ಬಗೆಗಿನ ಹಿರಿಮೆ ಗರಿಮೆಗಳ ಕುರಿತಾದ ತತ್ವಶಾಸ್ತ್ರಾಧಾರಿತ ಸ್ವೀಕಾರ ಮತ್ತು ನಿರಾಕರಣೆ ಎರಡೂ ಅಪಾಯಕಾರಿಯೆ. ಆಯಾ ರಾಜ್ಯದವರಿಗೆ ತಮ್ಮ ರಾಜ್ಯ ಭಾಷೆಯ ಬಗ್ಗೆ ಇನ್ನಿಲ್ಲದ ಅಭಿಮಾನ, ಪ್ರೀತಿ, ಗೌರವ, ಹೆಮ್ಮೆ ಎಲ್ಲವೂ ಇರುತ್ತವೆ. ಒಂದು ಶ್ರೇಷ್ಠ, ಇನ್ನೊಂದು ಕನಿಷ್ಠ, ಒಂದು ರಾಜ್ಯ ಭಾಷೆ, ಇನ್ನೊಂದು ರಾಷ್ಟ್ರ ಭಾಷೆ ಎಂಬೆಲ್ಲ ವಿಶೇಷಣಗಳು ನಮ್ಮನ್ನು ಒಂದುಗೂಡಿಸುವುದಕ್ಕಿಂತ ದೂರ ತಳ್ಳುವುದೇ ಹೆಚ್ಚು. ಹೊಸ ಶಿಕ್ಷಣ ನೀತಿಯಲ್ಲಿ ಇಂಥ ಅಪಸವ್ಯಗಳಿಗೆ ಜಾಗವಿಲ್ಲ ಎನ್ನಲಾಗುತ್ತಿದೆ. ಅನುಷ್ಠಾನ ಪ್ರಾರಂಭವಾದಾಗ ಮಾತ್ರ ಸತ್ಯ ತಿಳಿಯುತ್ತದೆ.

## ಎನ್‌ಸಿಎಫ್‌ನ ಉದ್ದೇಶವೇನು?

ದೇಶದ ಇಡೀ ಶಿಕ್ಷಣ ವ್ಯವಸ್ಥೆಯನ್ನು ನೂತನ ಶಿಕ್ಷಣ ನೀತಿಯ ಅನ್ವಯ ಧನಾತ್ಮಕವಾಗಿ ಬದಲಾಯಿಸುವುದು. ಅದಕ್ಕಾಗಿ ಬೋಧನೆ, ಶಿಕ್ಷಣ ಶಾಸ್ತ್ರ, ಕಲಿಕಾಕ್ರಮ, ಮೌಲ್ಯಮಾಪನ ಕಲೆ ಮತ್ತು ಪಠ್ಯಕ್ರಮದಲ್ಲಿ ವಸ್ತುನಿಷ್ಠ ಬದಲಾವಣೆ ತರುವುದು.

ಪಠ್ಯಕ್ರಮ ಎನ್ನುವುದು ಕೇವಲ ಶಾಲೆಗಳಲ್ಲಿ ಕಲಿಯುವ ವಿಷಯಗಳಿಗಷ್ಟೇ ಸೀಮಿತವಲ್ಲ, ಅದು ವಿದ್ಯಾರ್ಥಿಗೆ ಆಯಾ ವಯೋಮಾನದ ಒಟ್ಟು ಅನುಭವ ನೀಡುವಂತಿರಬೇಕು. 'ಶಿಕ್ಷಣ ಕಲೆ' ಎನ್ನುವುದು ಪುಸ್ತಕದ ಪಾಠವನ್ನು ಬೋಧಿಸಲು ಮತ್ತು ಕಲಿಸಲು ಮಾತ್ರ ಸೀಮಿತವಾಗಬಾರದು. ಶಾಲೆಯ ವಾತಾವರಣ ಮತ್ತು ಸಂಸ್ಕೃತಿಯನ್ನೂ ಪ್ರತಿಫಲಿಸುವಂತಿರಬೇಕು. ಬದಲಾವಣೆ ಸಮಗ್ರ ಮತ್ತು ಸಂಪೂರ್ಣವಾಗಿರಬೇಕು ಎನ್ನುವ ನೀತಿ ವಿದ್ಯಾರ್ಥಿಯ ಪ್ರತೀ ಕಲಿಕಾ ಕ್ರಮವೂ ಧನಾತ್ಮಕತೆಯನ್ನುಂಟು ಮಾಡುವಂತಿರಬೇಕು.

## ಪಠ್ಯ-ಪಠ್ಯೇತರದ ಭೇದವಿಲ್ಲ

ನೂತನ ಶಿಕ್ಷಣ ನೀತಿಯ ಕುರಿತಾದ ಪೂರ್ವಭಾವಿ ಕರಡು ವಿದ್ಯಾರ್ಥಿಗಳಿಗೆ ಬೇರೆ ಬೇರೆ ವಿಭಾಗಗಳ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಓದುವ